**ಓ.ಎಸ್. 80/2022, ಪಿ.ಡಬ್ಲೂ-1 ಹೆಸರುಃ ಗುರುಬಸಮ್ಮ**

**ದಿಃ13-10-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ ಆರ್.ಎಂ.ಓ. ವಕೀಲರಿಂದಃ**

ದಾವಾ ಸ್ವತ್ತಿನ ಖಾತೆಯು 2000 ನೇ ಸಾಲಿನಲ್ಲಿಯೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಮ್ಮತಿಯ ಮೇರೆಗೆ ದಾವಾ ಸ್ವತ್ತಿನ ಖಾತೆಯು ಎಂ.ಆರ್.8/2000-01 ರಂತೆ ಪ್ರತಿವಾದಿಯ ಹೆಸರಿನಲ್ಲಿ ನಮೂದಾಗಿದ್ದು, ಅಂದಿನಿಂದಲೂ ಸಹ ಪ್ರತಿವಾದಿಯೇ ದಾವಾ ಸ್ವತ್ತಿನ ಕುರಿತಾಗಿ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಕೊಳವೆ ಬಾವಿಯನ್ನು ಹಾಕಿಸಿ, ಮುಳ್ಳು ತಂತಿಯನ್ನು ಹಾಕಿಸಿದ್ದಾರೆ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಅಡಿಕೆ ತೋಟ ಬೆಳೆಸಿದ್ದಾರೆ ಎಂದರೆ ಸರಿ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಪರಂಗಿ ಹಣ್ಣಿನ ಗಿಡಗಳನ್ನು ಸಹ ಹಾಕಿದ್ದರು ಎಂದರೆ ಗೊತ್ತಿಲ್ಲ. ಪ್ರತಿವಾದಿಯು ದಾವಾ ಸ್ವತ್ತಿನ ಕುರಿತಾಗಿ 2000 ನೇ ಸಾಲಿನಿಂದ ಸ್ವಾದೀನತೆಯನ್ನು ಹೊಂದಿದ್ದು, ಹಾಗಾಗಿ ಸ್ವಾದೀನತೆಯ ಹಕ್ಕನ್ನು ಹೊಂದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲದೆ ಅವರು ಮಾಡಿಕೊಂಡಿದ್ದು, ಏನು ಮಾಡಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಪ್ರತಿವಾದಿಯ ಹೆಸರಿಗೆ ದಿನಾಂಕ 07.07.2000 ರಂದು ಜಾರಿಮಾಡಿಕೊಟ್ಟಿರುವ ಕರಾರು ಪತ್ರದ ಆಧಾರದಲ್ಲಿ ಪ್ರತಿವಾದಿಯು ದಾವಾ ಸ್ವತ್ತಿನ ಕುರಿತಾಗಿ ಸ್ವಾದೀನಾನುಭವದ ಹಕ್ಕನ್ನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕುರಿತಾಗಿ ನನಗೆ ಯಾವುದೇ ಹಿಸ್ಸೆ ಮತ್ತು ಸ್ವಾದೀನಾನುಭವದ ಹಕ್ಕು ಇಲ್ಲದಿದ್ದಾಗ್ಯೂ, ವಾಸ್ತವಾಂಶವನ್ನು ಮರೆಮಾಚಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಸುಮಾರು ರೂ.25 ಲಕ್ಷ ಹಣವನ್ನು ವ್ಯಹಿಸಿ ಅಡಿಕೆ ತೋಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಯಾವುದೇ ವಿಚಾರವನ್ನು ಹೇಳದೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಾನು ಕ್ರಯದ ಕರಾರು ಪತ್ರ ಮಾಡಿಕೊಟ್ಟು 25 ವರ್ಷಗಳ ಕಾಲ ಸುಮ್ಮನಿದ್ದು, ಈಗ ಕುಬೇರಪ್ಪರವರ ಮಗನಾದ ರವಿಕುಮಾರ್‌ರವರ ಮಾತನ್ನು ಕೇಳಿಕೊಂಡು, ದಾವಾ ಸ್ವತ್ತನ್ನು ಕಬಳಿಸುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ